# ಕಡಲ ತೀರದಲಿ ಜಟಾಯು

ಈ ಹಿಂದೆ ಉಡುಪಿಯ ಬೀಚ್ ಅಭಿವೃದ್ಧಿ ಸಮಿತಿಯು ಮಲ್ಪೆ ಬಳಿ ಸೀವಾಕ್ ವೇ ಸ್ಥಾಪಿಸಿದಾಗ ಅದರ ನಡುವೆ ಬೆಸ್ತರ ಕುಟುಂಬದ ಕಲಾಕೃತಿ ಪ್ರವಾಸಿಗರ ಗಮನ ಸೆಳೆದಿತ್ತು. ಸೆಲ್ಫಿ ಕೇಂದ್ರವಾಗಿತ್ತು. ಇದೀಗ ಸೀವಾಕ್ ವೇ ಪ್ರವೇಶವಾಗುವ ಮುನ್ನ ತೆಬ್ಮಾ ಶಿಪ್‌ಯಾರ್ಡ್ ಹತ್ತಿರ ಖಾಲಿ ಇರುವ 500 ಮೀಟರ್ ಜಾಗವನ್ನು ಪ್ರವಾಸಿಗರಿಗಾಗಿ ಮತ್ತಷ್ಟು ಆಕರ್ಷಣೆಯ ಕೇಂದ್ರವನ್ನಾಗಿ ಮಾಡಲು ಹೆಜ್ಜೆಯಿಟ್ಟಿದೆ. ಅದರ ಸಲುವಾಗಿ ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಕಲಾಕೃತಿಗಳನ್ನು ಅನಾವರಣ ಮಾಡಿ ಜನರಿಗೆ ಪರಿಚಯಿಸಲಾಗುತ್ತಿದೆ. ರಾಮಾಯಣದಲ್ಲಿ ಬರುವ ತ್ಯಾಗದ ವ್ಯಕ್ತಿತ್ವ ಹೊಂದಿದ್ದ ಜಟಾಯು ಪ್ರತಿಮೆ ಅದರಲ್ಲೊಂದು!

15 ಅಡಿ ಎತ್ತರದ ಈ ಕಲಾಕೃತಿಯನ್ನು ಸಿಮೆಂಟ್‌ನಿಂದ ರಚಿಸಲಾಗಿದೆ. ರೆಕ್ಕೆ ಬಿಚ್ಚಿ ಕರಾವಳಿಗೆ ಹಾರಿ ಬಂದು ನಿಂತಂತೆ ಕಾಣುವ ಜಟಾಯುವನ್ನು ಯಕ್ಷಗಾನ ವೇಷಧಾರಿಂದ ಕಲ್ಪನೆಯಲ್ಲಿ ಮೂಡಿಸಿದವರು ಖ್ಯಾತ ಕಲಾವಿದ ಪುರುಷೋತ್ತಮ ಅಡ್ವೆ. ಪಾತಿದೋಣಿಯನ್ನು ನಡೆಸುವ ಬೆಸ್ತರು, ಜಾನಪದ ಕ್ಷೇತ್ರದ ಮರಳು ಕಲಾಕೃತಿಗಳು ಮುಂದೆ ಅಲ್ಲಿ ಕಾಣಿಸಿಕೊಳ್ಳಲಿವೆ.

—ಜೀವನ್ ಶೆಟ್ಟಿ





# ಜೀವ ರೈಲು

ಮಲೆನಾಡಿನಲ್ಲಿ ಮಳೆಗಾಲದ ನಂತರ ಅಪರೂಪದ ಕೀಟ ವೈವಿಧ್ಯಗಳು ಕಾಣಸಿಗುತ್ತವೆ. ಉತ್ತರಕನ್ನಡದ ಯಲ್ಲಾಪುರ ತಾಲ್ಲೂಕಿನ ತೇಲಂಗಾರದ ಮೂಲೆಮನೆಯ ಮಂಜುನಾಥ ಗಾಂವ್ಕಾರರ ಅಡಿಕೆ ತೋಟದಲ್ಲಿ ಕಂಡ ಈ ಕಂಬಳಿಹುಳವು ಆಕರ್ಷಕವಾಗಿದೆ. ಕಂದು ಮತ್ತು ಬಿಳಿಯ ಮೈಬಣ್ಣ ಹೊಂದಿದ್ದು, ದೊಡ್ಡದಾದ ಹೊಳೆಯುವ ಕಣ್ಣುಗಳನ್ನು ಹೊಂದಿದೆ. ದೂರದಿಂದ ನೋಡಿದರೆ ಹಳಿಯಿಲ್ಲದೇ ನೆಲದಲ್ಲಿ ಸಾಗಿ ಬಂದ ಪುಟ್ಟ ರೈಲಿನ ಹಾಗೆ ಕಾಣುತ್ತದೆ.

—ದತ್ತಾತ್ರೇಯ ಭಟ್ಟ, ಕಣ್ಣಿಪಾಲ

# ಇನ್ನೂರು ವರ್ಷದ ಮರ

ಬ್ರಿಟಿಷರ ಕಾಲದಲ್ಲಿ ಸರ್ವೆ ಮಾಡುವಾಗ ಕಡತ ಸೇರಿದ್ದ ಎರಡುನೂರು ವರ್ಷಗಳಿಗಿಂತ ಹಳೆಯದಾದ ಮಾವಿನ ಮರವೊಂದು ಶಿರಸಿಯ ಕಬ್ಬೆಯ ಗುರುಪಾದ ಹೆಗಡೆಯವರ ಜಮೀನಿನಲ್ಲಿದೆ. ರಿಕಾರ್ಡ್ ಉತಾರಿನಲ್ಲಿ ಕುರುಬರ ಮಾವಿನಮರದ ತುಂಡು ಸರ್ವೆ ನಂ 22 ಎಂದು ಇಂದಿಗೂ ನಮೂದಿದೆ. ಹಿಂದೆ ಅರ್ಧ ಎಕರೆ ಪ್ರದೇಶದಲ್ಲಿ ವಿಸ್ತರಿಸಿತ್ತು. ಈಗ ಅದರ ರೆಂಬೆ ಕೊಂಬೆಗಳನ್ನು ಕತ್ತರಿಸಿದ್ದಾರೆ. ಹದಿನೆಂಟು ಫೂಟು ಸುತ್ತಳತೆಯಿದ್ದು ಎತ್ತರ ಸುಮಾರು ಇಪತ್ತು ಫೂಟು. ಚಿಕ್ಕವರೂ ಮರ ಏರಿ ಕುಳಿತು ಆನಂದಿಸುತ್ತಾರೆ. ಮರದ ಪೊಟರೆಯೊಳಗೆ ಒಬ್ಬರು ವಿಶ್ರಾಂತಿ ಪಡೆಯುವಷ್ಟು ವಿಸ್ತಾರವಾಗಿದೆ. ಇಂದಿಗೂ ಈ ಮಾವಿನ ಮರ ಹಣ್ಣುಗಳನ್ನು ನೀಡುತ್ತಾ ಇದೆ. ಅಂದ ಹಾಗೆ ಮುಂಗಾರಿನ ಹೊತ್ತಿಗೆ ಇದರ ಮಾವಿನ ಹಣ್ಣುಗಳನ್ನು ಮೆಲ್ಲಬಹುದು. ಮರವನ್ನು ಜೋಪಾನವಾಗಿಟ್ಟ ಇವರ ಪರಿಸರ ಪ್ರೀತಿ ಮೆಚ್ಚಲೇ ಬೇಕು.

—ಗಣಪತಿ ಕಂಚಿಪಾಲ ತೇಲಂಗಾರ

